## <u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## <u>ಸಿ.ಸಿ. ಸಂಖ್ಯೆ:287/2025</u>

**ಸಾಕ್ಷಿಯನ್ನು ದಿಃ 20.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ವೆಂಕಟೇಶ್ ಗೌಡ | ಸಿಡಬ್ಲ್ಯೂ:1 | ಪಿಡಬ್ಲ್ಯೂ:1 |
| ತಂದೆಯ ಹೆಸರು | ವೆಂಕಟೇಗೌಡ | | |
| ವಯಸ್ಸು | 74 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸಸ್ಥಳ | ಬೂಚಹಳ್ಳಿ | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ಜಲೇಂದ್ರ ನನ್ನ ಮಗ. 11 ತಿಂಗಳ ಹಿಂದೆ ಸಂಜೆ 6.30 ಗಂಟೆ ಸಮಯದಲ್ಲಿ ಜಮೀನಿನಲ್ಲಿ ಬೆಳೆದ ಶುಂಠಿಯನ್ನು ವ್ಯಾಪಾರ ಮಾಡಲು ನನ್ನ ಮಗ ಮತ್ತು ಚಾಸಾ 2 ರವರು ಸ್ಕೂಟರ್ ನಲ್ಲಿ ಹೋಗಿದ್ದರು. ಹುಣಸೂರು ಕಡೆಯಿಂದ ಬಿಳಿಕೆರೆ ಕಡೆಗೆ ಹೋಗುತ್ತಿರುವಾಗ ಮಾರಳಯ್ಯನಕೊಪ್ಪಲು ಹತ್ತಿರ ಅಪಘಾತ ಅಯಿತು ಎಂದು ಚಾಸಾ 2 ರವರು ರಾತ್ರಿ 12.30- 1.00 ಗಂಟೆ ಸಮಯಕ್ಕೆ ಪೋನ್ ಮಾಡಿ ತಿಳಿಸಿದರು. ಹುಣಸೂರು ಠಾಣಹತ್ತಿರ ಹೋದಾಗ ನನ್ನ ಮಗನು ಗಾಯಗೊಂಡು ಮರಣ ಹೊಂದಿದ್ದನ್ನು ನೋಡಿರುತ್ತೇನೆ. ನಂತರ ಮರುದಿನ ಬೆಳಿಗ್ಗೆ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ದೂರನ್ನು ನಿಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 1(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲು ಸಸಅ ರವರಿಂದಃ–</u>**

ದಿಃ 02.01.2025 ರಂದು ನನ್ನ ಮಗ ಜಲೇಂದ್ರ ಶುಂಠಿ ವ್ಯಾಪಾರ ಮಾಡಲು ಬಸರಾಜು ಅವರ ಕೆಎ 45 ಯು 9521 ಹೀರೊ ಸ್ಲೆಂಡರ್ ಬೈಕ್ ವ್ಯಾಪಾರಕ್ಕೆ ಮುಗಿಸಿಕೊಂಡು ಬರುವಾಗ ಸದರಿ ಅಪಘಾತ ಆಗಿತ್ತು ಎಂದರೆ ಸರಿ. ದಿಃ 03.01.2025 ರಂದು ಮಧ್ಯರಾತ್ರಿ 12.30 ಗಂಟೆ ಸಮಯದಲ್ಲಿ ಚಾಸಾ 2 ಬಸವರಾಜು ರವರು ಬೈಕ್ ಅನ್ನು ರಸ್ತೆ ಬದಿ ನಿಲ್ಲಿಸಿ ಆಗ ನನ್ನ ಮಗ ಬೈಕ್ ಅನ್ನು ವರಗಿಕೊಂಡು ನಿಂತಿದ್ದಾಗ ಅದೆ ಸಮಯಕ್ಕೆ ಯಾವುದೊ ವಾಹನ ಹುಣಸೂರು ಕಡೆಯಿಂದ ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ನನ್ನ ಮಗನಿಗೆ ಡಿಕ್ಕಿ ಪಡಿಸಿ ಹೊರಟು ಹೋಯಿತು ಎಂದು ವಿಚಾರ ಗೊತ್ತಾಯಿತು ಎಂದರೆ ಸರಿ. ನಂತರ ಮಾರನೆ ದಿನ ಹುಣಸೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ನನ್ನ ಮಗನನ್ನು ನೋಡಿದಾಗ ಅವರ ತಲೆಗೆ, ಮೈಕೈಗೆ, ಮುಖಕ್ಕೆ ಗಾಯವಾಗಿ ಸಡನ್ನಾಗಿ ಮೃತ ಪಟ್ಟಿದ್ದು ಗೊತ್ತಾಯಿತು ಎಂದರೆ ಸರಿ. ದಿಃ 03.01.2025 ರಂದು ನನ್ನ ಮಗನಿಗೆ ಡಿಕ್ಕಿಪಡಿಸಿದ ವಾಹನ ಅಶೋಕ್ ಲೈಲ್ಯಾಂಡ್ ಗೂಡ್ಸ ಸಂಖ್ಯೆ ಕೆಎ 09 ಎಎ 1617 ಎಂದು ಗೊತ್ತಾಯಿತು ಎಂದು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ನನಗೆ ಒಬ್ಬ ಮಗ ಇಬ್ಬರು ಹೆಣ್ಣು ಮಕ್ಕಳು. ನನ್ನ ಮಗ ಬೂಚಹಳ್ಳಿಯಲ್ಲಿ ವಾಸವಾಗಿದ್ದರು. ನನಗೆ ಸೇರಿದ ಜಮೀನು ಬೂಚಹಳ್ಳಿಯಲ್ಲಿ ಇದೆ. ಬೂಚಹಳ್ಳಿ ಹೋಗ ಬೇಕಂದರೆ ಬಿಳಿಕೆರೆ ಪಕ್ಕದಿಂದ ಹೋಗಬೇಕಾಗುತ್ತದೆ ಎನ್ನುತ್ತಾರೆ. ಅಪಘಾತವನ್ನು ನಾನು ಖುದ್ದಾಗಿ ನೋಡಿಲ್ಲ, ಬೇರೆಯವರು ಹೇಳಿದ ಮೇಲೆ ಗೊತ್ತಾಯಿತು. ಯಾವ ವಾಹನದಿಂದ ಏನಾಯಿತು ಎಂದು ಸಹ ನನಗೆ ಗೊತ್ತಿಲ್ಲ. ಚಾಸಾ 2 ರವರು ಬಸವರಾಜು ನನ್ನ ತಂಗಿಯ ಮಗ. ಚಾಸಾ 2 ರವರು ನಮ್ಮ ಊರಿನ ಪಕ್ಕ

ಮೂಡಲಕೊಪ್ಪಲಿನವರು. ಮರಳಯ್ಯನ ಕೊಪ್ಪಲು ಬಳಿ ಅಪಘಾತ ಆಗಿರುತ್ತದೆ. ಹುಣಸೂರುಕಡೆಯಿಂದ ಹೋಗಬೇಕಾಗದರೆ ಮೊದಲು ಮೂಡಲಕೊಪ್ಪಲು ಸಿಗುತ್ತದೆ ಆನಂತರ ಮರಳಯ್ಯನ ಕೊಪ್ಪಲು ಸಿಗುತ್ತದೆ ಸಾಕ್ಷಿ ಮೊದಲು ಮರಳಯ್ಯನ ಕೊಪ್ಪಲು ಸಿಗುತ್ತದೆ, ನಂತರ ಬಿಳಿಕೆರೆ ಕಡೆಗೆ ಮೂಡಲಕೊಪ್ಪಲು ಸಿಗುತ್ತದೆ ಎನ್ನುತ್ತಾರೆ.

ಪಿರಿಯಾಪಟ್ಟಣದಲ್ಲಿ ವಾಷಿಂಗ್ ಗೆಂದು ಶುಂಠಿಯನ್ನು ತೆಗೆದುಕೊಂಡು ಹೋಗಿದ್ದರು. ನನ್ನ ಮಗನಿಗೆ ಅಪಘಾತ ಆಗಿರುವುದು ಹೇಳಿರುತ್ತಾರೆ, ಆದರೆ ಯಾವ ವಾಹನದಿಂದ ಹೇಗಾಯಿತು ಎಂದು ಎಂದು ಹೇಳಿರುವುದಿಲ್ಲ. ಆರೋಪಿತನ ಯಾವುದೆ ತಪ್ಪು ಇಲ್ಲದಿದ್ದರೂ ನಾನು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.